**ಕರ್ನಾಟಕ ಸರ್ಕಾರ**

ನಂ. : ವನಇ 142 ಎಂಎನ್‌ಎಕ್ಸ್ 95

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.
ದಿನಾಂಕ : 12.1.1996

**ಅಧಿಸೂಚನೆ**

ಸರ್ಕಾರದ ಅಧಿಸೂಚನೆ ಸಂಖ್ಯೆ : ಹೆಚ್‌ಯುಡಿ 142 ಎಂಎನ್‌ಎಕ್ಸ್ 95, ದಿನಾಂಕ : 12.1.1996 ರಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ. ಸದರಿ ಪ್ರದೇಶಕ್ಕೆ ಯೋಜನಾ ಪ್ರಾಧಿಕಾರವನ್ನು ರಚಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಹಾಗೂ ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕೆಲವು ಪ್ರದೇಶಗಳನ್ನು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಪ್ರಕರಣದ (2) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಸದಸ್ಯರನ್ನೊಳಗೊಂಡ ಯೋಜನಾ ಪ್ರಾಧಿಕಾರವನ್ನು ರಚಿಸಲು ಒಪ್ಪಿಗೆ ನೀಡಿದೆ ಮತ್ತು ಅದು ದಿನಾಂಕ : 12.01.1996 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

| | | |
|---|---|---|
| 1) | ಮೆಟ್ರೋಪಾಲಿಟನ್ ಆಯುಕ್ತರು<br>ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ<br>ಪ್ರಾಧಿಕಾರ, ಬೆಂಗಳೂರು. | ಅಧ್ಯಕ್ಷರು |
| 2) | ನಗರ ಯೋಜನಾ ಜಂಟಿ ನಿರ್ದೇಶಕರು<br>ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ<br>ಪ್ರಾಧಿಕಾರ, ಬೆಂಗಳೂರು. | ಸದಸ್ಯ-ಕಾರ್ಯದರ್ಶಿ |
| 3) | ಸದರಿ ಪ್ರದೇಶದ ವ್ಯಾಪ್ತಿಯೊಳಗೆ ಬರುವ<br>ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಯೊಬ್ಬರು | ಸದಸ್ಯರು |
| | ಅ) ಸ್ಥಳೀಯ ಪ್ರಾಧಿಕಾರ ತನ್ನ ಸದಸ್ಯರುಗಳ<br>ಪೈಕಿ ನಾಮಕರಣ ಮಾಡಿದ ಒಬ್ಬ ಪ್ರತಿನಿಧಿ | ಸದಸ್ಯರು |
| | ಆ) ಸ್ಥಳೀಯ ಪ್ರಾಧಿಕಾರದ ಮುಖ್ಯ<br>ಕಾರ್ಯನಿರ್ವಹಣಾಧಿಕಾರಿ | ಸದಸ್ಯರು |
| 4) | ರಾಜ್ಯ ಸರ್ಕಾರದ ಆಯ್ಕೆ ಮಾಡುವ ಇತರೆ<br>ಮೂರು ಸದಸ್ಯರುಗಳು : ಅದರಲ್ಲಿ ಒಬ್ಬ ಸದಸ್ಯರು<br>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ<br>ಹಾಗೂ ಮತ್ತೊಬ್ಬ ಸದ್ಯರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ<br>ಪ್ರಾಧಿಕಾರದಿಂದ ಮತ್ತೊಬ್ಬರು ಕರ್ನಾಟಕ ಯೋಜನಾ<br>ಪ್ರಾಧಿಕಾರದ ನಿಯಮ 1965ರ ಕಲಂ 5 ರೀತ್ಯಾ ಅರ್ಹತೆ ಪಡೆದವರು | ಸದಸ್ಯರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

sd/-

(ಸಿದ್ಧರಾಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ ವಸತಿ ಮತ್ತು
ನಗರಾಭಿವೃದ್ಧಿ ಇಲಾಖೆ